# ವಾರ್ತಾ ವಿಶ್ಲೇಷಣೆ

## ಸ್ವರ್ಗದಲ್ಲಿ ಸಂಕಟ

**ಅನೇಕ ಭಾರತೀಯರಿಗೆ** ಅಮೆರಿಕವೆಂದರೆ ಸ್ವರ್ಗಸಮಾನ. ಆದರೆ ಇತ್ತೀಚೆಗೆ ಈ ಕಲ್ಪನೆ ಸುಳ್ಳಾಗುತ್ತಿದ್ದು ಅನೇಕರು ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ (ಪುಣ್ಯ ಮುಗಿದುಹೋದಮೇಲೆ ಮರ್ತ್ಯಲೋಕಕ್ಕೆ ಹಿಂತಿರುಗುತ್ತಾನೆ) ಎನ್ನುವಂತೆ ಮರಳಿ ಭಾರತಕ್ಕೆ ಬರುತ್ತಿದ್ದಾರೆ. ಅನೇಕ ಕ್ಷೀಣಪುಣ್ಯರನ್ನು ಅವರೇ ವಾಪಸ್ ಕಳಿಸುತ್ತಿದ್ದಾರೆ, ಮತ್ತೆ ಅನೇಕರು ಸ್ವರ್ಗವೇ ನರಕಪ್ರಾಯವಾಗಿ ಹಿಂತಿರುಗುತ್ತಿದ್ದಾರೆ.

ಅಮೆರಿಕದಲ್ಲಿರುವ ಅನೇಕ ಹಿರಿಯ ಏಶಿಯನರು ಖಿನ್ನತೆ (*depression*)ಯಿಂದ ನರಳುತ್ತಿದ್ದಾರಂತೆ. ತನ್ನ ಮಕ್ಕಳ ಜೊತೆ ಅಮೆರಿಕಕ್ಕೆ ಇರಲು ಬಂದ ತನುಜ ಎಂಬ ಮಹಿಳೆ ಬಂದ ಮೂರು ವರ್ಷಗಳಲ್ಲಿಯೇ ತೀವ್ರ ಖಿನ್ನತೆ(*intense depression*)ಯಿಂದ ಮೃತಪಟ್ಟಳೆಂದು *India West* ವರದಿ ಮಾಡುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವ ೬೫ ವರ್ಷಕ್ಕೆ ಮೀರಿದ ಮಹಿಳೆಯರ ಪೈಕಿ ಏಶಿಯ-ಅಮೆರಿಕನರೇ ಅತ್ಯಧಿಕವಂತೆ. ಭಾರತದಿಂದ ಅಮೆರಿಕಕ್ಕೆ ಹೋಗುವ ಹಿರಿಯ ಭಾರತೀಯರನೇಕರಿಗೆ ಅಲ್ಲಿಯ ಜೀವನ ವಿಧಾನದೊಂದಿಗೆ ಹೊಂದಿಕೊಳ್ಳಲು ಕಷ್ಟವಾಗಿ ಅತ್ಯಂತ ಅಸಂತೋಷದ ಜೀವನವನ್ನು ನಡೆಸುತ್ತಿದ್ದಾರೆ. ಅಲ್ಲಿ ಕೆಲಸವಿಲ್ಲದವರಿಗೆ ಬೆಲೆಯೇ ಇಲ್ಲ, ಎಲ್ಲರ ತಿರಸ್ಕಾರಕ್ಕೆ ಬಲಿಯಾಗಿ ಒಂಟಿತನದಿಂದ ನರಳಬೇಕಾಗುತ್ತದೆ. ಕೆಲವರು ಹಿಂತಿರುಗಿ ಬರುವುದಕ್ಕೂ ಹಣವಿಲ್ಲದೆ ಅಲ್ಲಿಯೇ ತಮ್ಮ ಜೀವನ ಯಾತ್ರೆಯನ್ನು ಮುಗಿಸುತ್ತಾರೆ. ಭಾರತದಲ್ಲಾದರೆ ಕೈಲಾಗದವನು ಬಾಯ್ಬಡಕನಾಗಿಯಾದರೂ ಜೀವನ ಸಾಗಿಸಬಹುದು. ಇಲ್ಲಿ ಹಿರಿಯರನ್ನು ಗೌರವಿಸುವ ಸಂಪ್ರದಾಯ ಇನ್ನೂ ಇದೆ. "ಈ ದೇಶದಲ್ಲಿ(ಅಮೆರಿಕದಲ್ಲಿ) ಹಿರಿಯರಾಗಿರುವುದು ಅತ್ಯಂತ ದುಃಖದಾಯಕ. ಇಂಡಿಯನ್-ಅಮೆರಿಕನರಿಗೆ ಮಾತ್ರ ಈ ಮಾತು ಅನ್ವಯಿಸುವುದಲ್ಲ"—ಎಂದು ಡಾ. ಮೇಜಿ ಸಿಂಘ್ India West ಪತ್ರಿಕೆಗೆ ತಿಳಿಸಿದ್ದಾರೆ.

ಭಾರತದಲ್ಲಿ ಕಿರಿಯರ ಗೌರವವನ್ನು ಅನುಭವಿಸಿ ರೂಢಿ ಇರುವ ಭಾರತೀಯ ಹಿರಿಯರು ಅಮೆರಿಕದಲ್ಲಿಯೂ ಅದನ್ನೇ ನಿರೀಕ್ಷಿಸಿ ನಿರಾಶರಾಗಿದ್ದಾರೆ—ವಿಶೇಷವಾಗಿ ಮಹಿಳೆಯರು. ಕೆಲವು ಭಾರತೀಯ ಅಮೆರಿಕನರು ತಮ್ಮ ತಂದೆತಾಯಿಯರಿಂದ ಕೆಲಸದಾಳುಗಳಂತೆ ದುಡಿಸಿಕೊಳ್ಳುತ್ತಾರೆ, ಅವರ ವೈಯಕ್ತಿಕ ಹಣವನ್ನು ದೋಚಿಕೊಳ್ಳುತ್ತಾರೆ. ಅನೇಕ ಮಹಿಳೆಯರು ಇಂಗ್ಲಿಷ್ ಸರಿಯಾಗಿ ಬಾರದಿರುವುದರಿಂದ ತೀವ್ರ ಒಂಟಿತನವನ್ನು ಅನುಭವಿಸುತ್ತಾರೆ.

**ಸ್ವರ್ಗ-ನರಕಗಳೆರಡೂ ಮನಸ್ಸಿನಲ್ಲೇ ಇರುವುದು, ಹೊರಗಡೆ ಅಲ್ಲ. ಮನಶ್ಶಾಂತಿಯೇ ಸ್ವರ್ಗ ಅಶಾಂತಿಯೇ ನರಕ.**

❑

## ಜನಭಾರ ಭೂಭಾರ

**ನಾಗರಿಕತೆ** ವೃದ್ಧಿಯಾಗುತ್ತಿದೆ, ಕೈಗಾರಿಕೋದ್ಯಮ ಬೆಳೆಯುತ್ತಿದೆ, ಸಂಪತ್ತು ಅಧಿಕಾಧಿಕವಾಗುತ್ತಿದೆ, ಸುಖಸಾಧನಗಳೂ ಸೌಕರ್ಯಗಳೂ ಇಮ್ಮಡಿಗೊಳ್ಳುತ್ತಿವೆ, ಜ್ಞಾನವೂ ವರ್ಧಿಸುತ್ತಿದೆ, ಜನರಲ್ಲಿ ಧಾರ್ಮಿಕ ಭಾವನೆಯೂ ಹೆಚ್ಚುತ್ತಿದೆ, ದೇವಾಲಯ ಚರ್ಚು ಮಸೀದಿಗಳು ಎಲ್ಲೆಲ್ಲಿಯೂ ತಲೆ ಎತ್ತುತ್ತಿವೆ, ಧ್ಯಾನ ಯೋಗ ಮುಂತಾದುವುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಹಾಗೆಯೇ ಸಮಸ್ಯೆಗಳೂ ಹೆಚ್ಚುತ್ತಿವೆ. ಕ್ಯಾನ್ಸರ್, ಏಯ್ಡ್ಸ್ ಮುಂತಾದ ಖಾಯಿಲೆಗಳೂ ಅಧಿಕವಾಗುತ್ತಿವೆ. ಇದುವರೆಗೂ ಏಯ್ಡ್ಸಿನಿಂದ ೨೫ ಮಿಲಿಯನ್ ಜನರು ಸತ್ತಿದ್ದಾರಂತೆ. ಹೀಗೆ ವಿವಿಧ ರೋಗಗಳಿಂದ, ಉಪವಾಸದಿಂದ, ಯುದ್ಧಗಳಿಂದ ಪ್ರಾಕೃತಿಕ ವಿಕೋಪಗಳಿಂದ ಸಾಯುವವರು ಅದೆಷ್ಟೋ ಮಂದಿ. ಆದರೂ ಭೂಮಿಯ ಮೇಲಿನ ಜನಸಂಖ್ಯೆ ಅನಿಯಂತ್ರಿತವಾಗಿ ವೃದ್ಧಿಯಾಗುತ್ತಿದೆ. ಈಗ ಜಗತ್ತಿನ ಜನಸಂಖ್ಯೆ ೬.೧ ಬಿಲಿಯನ್ನಿಗೂ ಅಧಿಕ. ವಾರ್ಷಿಕವಾಗಿ ಶೇಕಡ ೧.೨% ರಷ್ಟು ಜನಸಂಖ್ಯೆ ವೃದ್ಧಿಯಾಗುತ್ತಿದೆಯಂತೆ—ಅಂದರೆ ಪ್ರತಿವರ್ಷವೂ ೭೭ ಮಿಲಿಯನ್ ಹೊಸಬರಿಗೆ ಉಣಿಸಬೇಕಾಗಿದೆ. ಈ ೬೧೦ ಕೋಟಿ ಜನರಲ್ಲಿ 1/5 ಭಾಗದಷ್ಟು ಜನರು ಮಾತ್ರ ಅಮೆರಿಕ, ಯೂರೋಪ್ ಮುಂತಾದ ಜಗತ್ತಿನ ಶ್ರೀಮಂತ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರಂತೆ. ಈ ಅಲ್ಪಸಂಖ್ಯಾತರಲ್ಲಿ ಪ್ರತಿಯೊಬ್ಬರಿಗೆ ಸರಾಸರಿ ೨೦ ಎಕರೆ ಭೂಮಿ, ಉಳಿದ ಬಹುಸಂಖ್ಯಾತರಿಗೆ ಕೇವಲ ೫ ಎಕರೆ. ಈ ಅಲ್ಪಸಂಖ್ಯಾತರಿಂದ ಆಗುತ್ತಿರುವ ಪರಿಸರ ಮಾಲಿನ್ಯವೂ ಅತ್ಯಧಿಕ. ನಿಜವಾಗಿಯೂ ಇದರ ದುಷ್ಪರಿಣಾಮವನ್ನು ಅನುಭವಿಸುವವರು ಬಹುಸಂಖ್ಯಾತರು.

ನಾಗರಿಕತೆಗೆ ತಕ್ಕಂತೆ ಸಂಸ್ಕೃತಿಯೂ ವೃದ್ಧಿಯಾಗದಿದ್ದರೆ ನಾಗರಿಕತೆ ಮಾನವನ ದುಃಖವನ್ನು ಹೆಚ್ಚಿಸುತ್ತದೆ. ನಾಗರಿಕತೆ ನಾವು ಏನು ಹೊಂದಿದ್ದೇವೆಯೊ ಅದು, ಸಂಸ್ಕೃತಿ ನಾವೇನಾಗಿರುವೆವೊ ಅದು. ಸಂಸ್ಕೃತಿ ನಮ್ಮ ಆಂತರಿಕವಾದ ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಸಂಬಂಧಿಸಿದುದು. ಈ ಬೆಳವಣಿಗೆಯ ಅಭಾವದಿಂದ ವ್ಯಕ್ತಿ ಸ್ವಾರ್ಥಿಯಾಗುತ್ತಾನೆ. ನಾಗರಿಕತೆಯ ಪ್ರಯೋಜನವನ್ನೆಲ್ಲ ತಾನೊಬ್ಬನೇ ಪಡೆಯಲು ಪ್ರಯತ್ನಿಸುತ್ತಾನೆ. ಇದರಿಂದ ಸ್ಪರ್ಧೆ ಉಂಟಾಗುತ್ತದೆ, ಇದರಿಂದ ದುಃಖ ಅಧಿಕವಾಗುತ್ತದೆ. ಇತ್ತ ನಾಗರಿಕತೆಯ ಪ್ರಯೋಜನದಿಂದ ವಂಚಿತರಾದ ಬಹುಸಂಖ್ಯಾತರಿಗಂತೂ ದುಃಖ ತಪ್ಪಿದ್ದಲ್ಲ. ಅಂತು ಒಟ್ಟಿನಲ್ಲಿ ಎಲ್ಲರೂ ದುಃಖಿಗಳೇ ಆಗಬೇಕಾಗುತ್ತದೆ. **ಈ ಪ್ರಪಂಚದಲ್ಲಿ ಸಿರಿತನವೂ ದುಃಖ, ಬಡತನವೂ ದುಃಖ. ಒಂದೇ ಒಂದು ಸುಖವೆಂದರೆ ಸಂತೃಪ್ತಿ.**

❑